## 2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ ರಾಣೇಬೆನ್ನೂರು.

## ಸಿಸಿ ನಂಬರಃ 177/2018

ಡಿ ಡಬ್ಲ್ಯೂ 1

**ಸಾಕ್ಷಿದಾರರ ಹೆಸರು** : ರಾಮನಗೌಡ ಪಾಟೀಲ್

**ತಂದೆಯ ಹೆಸರು** : ಈಶ್ವರಗೌಡ

**ವಯಸ್ಸು** : 58 ವರ್ಷ

**ಉದ್ಯೋಗ** : ವ್ಯವಸಾಯ

**ವಾಸ** : ಪಾಳ, ತಾಃ ಮುಂಡಗೋಡ್ , ಜಿಃ ಕಾರವಾರ.

**ದಿನಾಂಕಃ 04-03-2022 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರ ಆರೋಪಿ ಪರ ವಕೀಲರಿಂದಃ**

1. ಈ ಹಿಂದೆ ನಾನು ರಿಯಲ್ ಎಸ್ಟೇಟ್ ವ್ಯವಹಾರ ಮಾಡುತ್ತಿದ್ದೆ. ಈಗ 5-6 ವರ್ಷಗಳಿಂದ ಬಿಟ್ಟಿರುತ್ತೇನೆ. ದೂರುದಾರರು ನನಗೆ ಸಂಬಂಧಿಕರಾಗಬೇಕು. ದೂರುದಾರರ ಅಣ್ಣನ ಹೆಸರು ಸಿದ್ದಣ್ಣ ಚೂರಿ. ಇಬ್ಬರೂ ನನ್ನ ಬಳಿ ಬಂದು ಹೋಗಿ ಮಾಡುತ್ತಿದ್ದರು. ಸಿದ್ದಣ್ಣ ಚೂರಿಯವರು ರಿಯಲ್ ಎಸ್ಟೇಟ್ ವ್ಯಾಪಾರ ಮಾಡುತ್ತಿದ್ದರು ಅವರೊಂದಿಗೆ ದೂರುದಾರರೂ ಸಹ ನನ್ನನ್ನು ಭೇಟಿ ಮಾಡಲು ಬರುತ್ತಿದ್ದರು. 2010-11 ರಲ್ಲಿ ಸಿದ್ದಣ್ಣ ಚೂರಿ ಹಾಗೂ ದೂರುದಾರರು ನಮ್ಮ ಮನೆಗೆ ಬಂದು ಸಹಿ ಮಾಡಿದ 5 ಖಾಲಿ ಚೆಕ್ಕುಗಳನ್ನು ಹಾಗೂ ಬಿಳಿ ಹಾಳೆಯ ಮೇಲೆ ಸಹಿ ಮಾಡಿ ಇಟ್ಟಿದ್ದ 5 ಪೇಪರ್ ಗಳನ್ನು ತೆಗೆದುಕೊಂಡು ಹೋಗಿರುತ್ತಾರೆ. ಎಲ್ಲಾ ಚೆಕ್ಕುಗಳನ್ನು ಮತ್ತು ಬಿಳಿ ಹಾಳೆಗಳನ್ನು ದುರುಪಯೋಗ ಪಡಿಸಿಕೊಂಡು ಸಿದ್ದಣ್ಣಚೂರಿಯವರು ಬೇರೆಯವರ ಮೂಲಕ ಇದೇ ನ್ಯಾಯಾಲಯದ ಮುಂದೆ 4 ಚೆಕ್ ಬೌನ್ಸ ಕೇಸುಗಳನ್ನು ಹಾಕಿದ್ದು, ಅವುಗಳ ಪೈಕಿ 3 ಚೆಕ್ ಕೇಸುಗಳನ್ನು ವಾಪಸ್ಸು ತೆಗೆದುಕೊಂಡಿದ್ದು, ಈ ಕೇಸನ್ನೂ ಸಹ ವಾಪಸ್ಸು

ತೆಗೆದುಕೊಳ್ಳುತ್ತೇನೆ ಎಂದು ಹೇಳಿದ್ದರು. ಆದರೆ ವಾಪಸ್ಸು ತೆಗೆದುಕೊಳ್ಳಲಿಲ್ಲ.



2. ನಾನು ಮನೆಯಲ್ಲಿ ಇಲ್ಲದೇ ಇದ್ದಾಗ ನಮ್ಮ ಮನೆಯವರಿಗೆ ಹಣ ಬಿಡಿಸಿಕೊಳ್ಳುವ ಸಲುವಾಗಿ ಚೆಕ್ಕುಗಳನ್ನು ಸಹಿ ಮಾಡಿ ಇಟ್ಟಿದ್ದೆ. ದೂರುದಾರರು ಕಳಿಸಿದ ನೋಟೀಸು ನನಗೆ ಬಂದ ತಕ್ಷಣ ನಾನು ಏಕೆ ನನ್ನ ಚೆಕ್ಕುಗಳನ್ನು ದುರುಪಯೋಗ ಪಡಿಸಿಕೊಂಡಿದ್ದೀರಿ ಎಂದು ದೂರುದಾರರರನ್ನು ಮತ್ತು ಸಿದ್ದಣ್ಣ ಚೂರಿಯವರನ್ನು ಕೇಳಿದೆ. ಅದಕ್ಕೆ ಅವರು ಕೇಸನ್ನು ವಾಪಸ್ಸು ತೆಗೆದುಕೊಳ್ಳುತ್ತೇವೆ ಎಂದು ಹೇಳಿ 3 ಕೇಸುಗಳನ್ನು ಮಾತ್ರ ವಾಪಸ್ಸು ತೆಗೆದುಕೊಂಡರು . ನಾನು ನೋಟೀಸಿಗೆ ಉತ್ತರವನ್ನೂ ಸಹ ಕೊಟ್ಟಿರುತ್ತೇನೆ. ನಾನು ಪಿರ್ಯಾದಿದಾರರಿಂದ ಯಾವುದೇ ಸಮಯಕ್ಕೆ 6,50,000/- ಸಾಲ ಪಡೆದಿಲ್ಲ ಮತ್ತು ಅದರ ತೀರುವಳಿಗಾಗಿ ನಿಪಿ 1 ನ್ನು ಕೊಟ್ಟಿಲ್ಲ. ದೂರುದಾರರು ಇದೇ ರೀತಿ ಬೇರೆಯವರ ಮೇಲೂ ಸಹ ಸುಮಾರು 10 ಕೇಸುಗಳನ್ನು ರಾಣೇಬೆನ್ನೂರಿನ ಬೇರೆ ಬೇರೆ ನ್ಯಾಯಾಲಯಗಳಲ್ಲಿ ಹಾಕಿರುತ್ತಾರೆ. ಆದ್ದರಿಂದ ಈ ಪ್ರಕರಣದಿಂದ ನನ್ನನ್ನು ಬಿಡುಗಡೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

**<u>(ವಕೀಲರ ಕೋರಿಕೆ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು).</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸರಿ ಇದೆ.

2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ರಾಣೇಬೆನ್ನೂರು.